ಇಳಿಬಿಡುತ್ತಾ ಹೇಳುವನು. ಕತೆಯ ಎಂಡಿಂಗ್ ಕೇಳಿ ಖಿನ್ನಳಾದ ಹೆಂಡತಿಯ ಜೊತೆಗೆ ಗಂಡನೂ ದುಗುಡ ಮುತ್ತಿ ಮೌನವಾಗಿ ಕೂರುವನು.

ಹೀಗೆ ಕೊನೆಯಿಲ್ಲದ ಚಡಪಡಿಕೆ, ಚಟುವಟಿಕೆ, ಕ್ರಿಯೇಟಿವಿಟಿಗಳ ಲೋಕಶ್ರೇಷ್ಠ ಕಾದಂಬರಿಗಾರನ ಅದ್ಭುತ ಸೃಜನಶೀಲ ಕಾಲ ಮರಳಿ ಬಾರದ ಹಾಗೆ ಕಳೆದು ಹೋಗಿತ್ತು. ಈಗ ಮಾರ್ಕ್ವೆಜ್‌ಗೆ ಅದ್ಯಾವುದೂ ನೆನಪಿರಲಿಲ್ಲ.

### 3

2014ಕ್ಕೆ ಮಾರ್ಕ್ವೆಜ್‌ಗೆ ಎಂಬತ್ತೇಳು ತುಂಬಿತ್ತು. ಅಷ್ಟೊತ್ತಿಗಾಗಲೇ ಪೂರ್ಣ ಮರೆವು ಆವರಿಸಿತ್ತು. ಒಂದಿನ ಜೋರು ನೆಗಡಿಯಾಯಿತು. 'ಈ ಸಲ ಪಾರಾಗೋದು ಕಷ್ಟ' ಅಂದಳು ಮರ್ಸಿಡಿಸ್. ಬೇಡಬೇಡಾಂದರೂ ಮಾರ್ಕ್ವೆಜ್ ಆಸ್ಪತ್ರೆ ಸೇರಲೇಬೇಕಾಯಿತು.

ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿಸಿದ ತಕ್ಷಣ ಮಾರ್ಕ್ವೆಜ್ ಸಣ್ಣ ದನಿಯಲ್ಲಿ ಗೊಣಗುತ್ತಾನೆ, 'ಮನೇಗೋಗ್ಬೇಕು.' 'ಮನೇಲೇ ಇದೀರಲ್ಲ' ಎನ್ನುತ್ತಾಳೆ ಮರ್ಸಿಡಿಸ್. ಮಾರ್ಕ್ವೆಜ್ ಸುತ್ತ ನೋಡುತ್ತಾನೆ. ಮನೆಯ ಒಂದು ಕುರುಹೂ ಕಾಣದೆ ಖಿನ್ನನಾಗುತ್ತಾನೆ. ನಡುಗುವ ಬಲಗೈ ಎತ್ತಿ, ಇದು ನನ್ನದೇ ಹೌದು ಅಂದುಕೊಳ್ಳುತ್ತಾನೆ. ಬಲಗೈ ಮೆಲ್ಲಗೆ ಕೆಳ ಜಾರಿ ಕಣ್ಣೆವೆಗಳನ್ನು ಮುಚ್ಚುತ್ತದೆ. ಹುಬ್ಬು ಗಂಟಿಕ್ಕಿಕೊಳ್ಳುತ್ತವೆ. ತುಟಿ ಕಚ್ಚಿಕೊಳ್ಳುತ್ತವೆ. ಹಾಸಿಗೆಯಲ್ಲಿ ಉರುಳಿ ಬಿದ್ದಿದ್ದ ಮಾರ್ಕ್ವೆಜ್ ನಡುನಡುವೆ ಮೇಲೇಳುತ್ತಾನೆ. ಸುತ್ತ ಇದ್ದವರೆಲ್ಲ ಸಡಗರದಿಂದ ಇತ್ತ ತಿರುಗುತ್ತಾರೆ. ಮನೆಯವರು, ಡಾಕ್ಟರುಗಳು, ನರ್ಸುಗಳು ಮಾರ್ಕ್ವೆಜ್ ಏನಾದರೂ ಮಾತಾಡಲಿ ಎಂದು ಮೈಯೆಲ್ಲ ಕಿವಿಯಾಗಿಸಿಕೊಳ್ಳುತ್ತಾರೆ; ಅವನು ಉಸುರಿದ್ದನ್ನು ಕೇಳಿಸಿಕೊಳ್ಳಲು ಅಣಿಯಾಗುತ್ತಾರೆ. ಏನೇನೋ ಮಾತಾಡಿ ಅವನು ಮಾತಾಡುವಂತೆ ಮಾಡಲೆತ್ನಿಸುತ್ತಾರೆ. ಬದುಕಿರುವಾಗಲೇ ದಂತಕತೆಯಾಗಿದ್ದ ಸುಪ್ರಸಿದ್ಧ ಲೇಖಕನ ಜೊತೆ ಮಾತಾಡುವ ಪುಳಕ ಎಲ್ಲರಲ್ಲೂ ಮೊಳೆಯುತ್ತಿದೆ.

ಮಧ್ಯಾಹ್ನ ರೌಂಡ್ಸ್‌ಗೆ ಬಂದಿದ್ದ ತರುಣ ಡಾಕ್ಟರ್, 'ಹೇಗಿದೀರ?' ಅಂದರೆ, ಮಾರ್ಕ್ವೆಜ್, 'ಸ್ಟೂಡ್' ಅನ್ನುತ್ತಾನೆ! ಈ ನಡುವೆ ಮಾರ್ಕ್ವೆಜ್‌ಗೆ ಚರ್ಮದ ತೊಂದರೆಯಾಗಿ ನವೆಯಾಗುತ್ತಿದೆ. ನರ್ಸ್, 'ತೊಡೆಗೆ ಆಯಿಂಟ್‌ಮೆಂಟ್ ಹಚ್ಚಬೇಕು' ಅಂದಿದ್ದು ಕಿವಿಗೆ ಬಿದ್ದು ಮಾರ್ಕ್ವೆಜ್ ದಿಗಿಲುಗೊಂಡವನಂತೆ ಕಳ್ಳ ಮುಖ ಮಾಡುತ್ತಾ, ನಗುತ್ತಾ ಮೆಲ್ಲಗೆ ಕೇಳುತ್ತಾನೆ, 'ಅಂದ್ರೆ ನನ್ನ ಬಾಲ್ಸ್‌ಗಾ?' ರೂಮಿನಲ್ಲಿದ್ದವರೆಲ್ಲ ಬಿದ್ದು ಬಿದ್ದು ನಗತೊಡಗುತ್ತಾರೆ. ಅಂಥ ಮರೆವಿನಲ್ಲೂ ಅವನ ಬದುಕಿನ ಭಾಗವಾಗಿದ್ದ ತಮಾಷೆ ಒಮ್ಮೊಮ್ಮೆ ಮರುಕಳಿಸುತ್ತಲೇ ಇತ್ತು! ಮಹಾನ್ ಪ್ರತಿಭಾಶಾಲಿಗಳಿಗೆ ಅಸಾಧಾರಣ ಹಾಸ್ಯಪ್ರಜ್ಞೆಯಿರುತ್ತದೆ ಎನ್ನುವುದು ಮಾರ್ಕ್ವೆಜ್ ವಿಚಾರದಲ್ಲಿ ಮತ್ತಷ್ಟು ನಿಜವಾಗಿತ್ತು.

ಜೀವಮಾನವಿಡೀ ಮಾರ್ಕ್ವೆಜ್‌ನನ್ನು ಲವಲವಿಕೆಯಲ್ಲಿಟ್ಟಿದ್ದ ಸ್ತ್ರೀಚೈತನ್ಯ ಈಗಲೂ ಅವನಲ್ಲಿ ಅಷ್ಟಿಷ್ಟು ಮುದ ಉಕ್ಕಿಸುತ್ತದೆ. ಸುತ್ತ ಹೆಂಗಳೆಯರ ದನಿ ಏರತೊಡಗಿ ಮಾರ್ಕ್ವೆಜ್ ಕಣ್ಣು ಬಿಡುತ್ತಾನೆ. ಹೆಂಗಳೆಯರೆಲ್ಲ ಅವನತ್ತ ಧಾವಿಸಿ ಅಕ್ಕರೆಯಿಂದ ಮಾತಾಡತೊಡಗುತ್ತಾರೆ. ಮಾರ್ಕ್ವೆಜ್ ಕಣ್ಣು ಫಳಗುಡುತ್ತವೆ. ಮಾರ್ಕ್ವೆಜ್ ವಿರಾಮವಾಗಿ ಆ ಹೆಂಗಳೆಯರನ್ನೆಲ್ಲ ನೋಡುತ್ತಾ ಬಿಡುಬೀಸಾಗಿ ಹೇಳುತ್ತಾನೆ: 'ನಾನು ನಿಮ್ಮೆಲ್ರನ್ನೂ ಸಂಭೋಗಿಸೋಕಾಗಲ್ಲ.' ಹೆಂಗಳೆಯರೆಲ್ಲ ಒಂದೇಟಿಗೆ ಹೋ ಎಂದು ನಗತೊಡಗುತ್ತಾರೆ. ಚಣ ಬಿಟ್ಟು ಮರ್ಸಿಡಿಸ್ ಒಳಬರುತ್ತಾಳೆ, ಅವಳ ದನಿ ಅವನನ್ನು ಸಮ್ಮೋಹನಗೊಳಿಸುತ್ತದೆ.

ಒಳಬಂದ ಎರಡನೇ ಮಗ ಗೊಂಝಾಲೊನ ಗುರುತು ಹತ್ತದೆ ಮಾರ್ಕ್ವೆಜ್ ಪಿಳಿಪಿಳಿ ಕಣ್ಣು ಬಿಡುತ್ತಾನೆ. ಅಡುಗೆಯವಳನ್ನೋ, ಸೆಕ್ರೆಟರಿಯನ್ನೋ ಮಾತ್ರ ಒಂಚೂರು ಗುರುತಿಸಿದಂತೆ ಕಣ್ಣು ಬಿಡುತ್ತಾನೆ. ಅಷ್ಟೊತ್ತಿಗಾಗಲೇ ಎರಡು ಸಲ ಕ್ಯಾನ್ಸರ್ ಗೆದ್ದಿದ್ದ ಮರ್ಸಿಡಿಸ್ ಮತ್ತೆ ಲಾಸ್ ಏಂಜಲೀಸ್ ಆಸ್ಪತ್ರೆ ಸೇರಬೇಕಾಗಿ ಬರುತ್ತದೆ. ಮಾರ್ಕ್ವೆಜ್‌ಗೆ ಶ್ವಾಸಕೋಶದ ಕ್ಯಾನ್ಸರ್ ತಗುಲಿರುವ ರಿಪೋರ್ಟ್ ಬರುತ್ತದೆ. 'ಅಬ್ಬಬ್ಬ ಅಂದರೆ ಇನ್ನು ಕೆಲವು ತಿಂಗಳಷ್ಟೇ ಉಳಿದಾನು, ಅಷ್ಟೇ... ಇರುವಷ್ಟು ದಿನ ಮನೆಯಲ್ಲೇ